OS 277/2021 DW-1

**ದಿನಾಂಕಃ 08.04.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲ ರಿಂದಃ**

1. ಶ್ರೇಯಸ್ ಗೌಡ ಇವರ ಶಾಲಾದಾಖಲಾತಿಯ ನಕಲನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.1 ಎಂದು** ಗುರುತಿಸಲಾಯಿತು.
2. ಹರ್ಷವರ್ಧನ್ ಇವರ ಶಾಲಾದಾಖಲಾತಿಯ ನಕಲನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.2 ಎಂದು** ಗುರುತಿಸಲಾಯಿತು.
3. ಶ್ರೇಯಸ್ ಗೌಡ ಇವರ ಸ್ಕೂಲ್ ಅಡ್ಮಿಶನ್ ಎಕ್ಸ್ಟ್ರಾಕ್ಟ್ ನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.3 ಎಂದು** ಗುರುತಿಸಲಾಯಿತು.
4. ಹರ್ಷವರ್ಧನ್ ಇವರ ಸ್ಕೂಲ್ ಅಡ್ಮಿಶನ್ ಎಕ್ಸ್ಟ್ರಾಕ್ಟ್ ನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.4 ಎಂದು** ಗುರುತಿಸಲಾಯಿತು.
5. ಕಾಮರಾಜು ರವರ ಮರಣ ಪ್ರಮಾಣ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.5 ಎಂದು** ಗುರುತಿಸಲಾಯಿತು.
6. ಲೋಕಮ್ಮ ರವರ ಮರಣ ಪ್ರಮಾಣ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.6 ಎಂದು** ಗುರುತಿಸಲಾಯಿತು.
7. ಕೋದಂಡರಾಮಯ್ಯ ರವರ ಮರಣ ಪ್ರಮಾಣ ಪತ್ರದ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.7 ಎಂದು** ಗುರುತಿಸಲಾಯಿತು.
8. ಆದಾಯ ಮತ್ತು ಜಾತಿ ಪ್ರಮಾಣ ಪತ್ರದ 2 ಆನ್ ಲೈನ್ ಪ್ರತಿಗಳನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.8 ಎಂದು** ಗುರುತಿಸಲಾಯಿತು.
9. 14 ಸ್ಕೂಲ್ ಫೀ ರಶೀದಿಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಒಟ್ಟಾಗಿ **ನಿ.ಡಿ.9 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನನ್ನ ವಿವಾಹ 2003 ರಲ್ಲಿ ಆಗಿರುತ್ತದೆ. ನನ್ನ ಯಜಮಾನರ ಊರಾದ ಶಿಡ್ಲೆಕೋಣದಲ್ಲಿ ಆಸ್ತಿ ಇದೆ ಎಂದರೆ ಸರಿ. ಕೋದಂಡರಾಮಯ್ಯನವರಿಗೆ 3 ಜನ ಮಕ್ಕಳು. ಅವರುಗಳೆಂದರೆ ಆನಂದ್ , ಶೈಲಜಾ ಮತ್ತು ಕಾಮರಾಜು. ಈ ದಾವೆಯ ವಾದಿಗಳು ಕೋದಂಡರಾಮಯ್ಯನವರಿಗೆ ಸೊಸೆ ಮತ್ತು ಮೊಮ್ಮಗಳು ಆಗಬೇಕು.

ಕೋದಂಡರಾಮಯ್ಯನವರು ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿರುವುದಿಲ್ಲ. ಕೋದಂಡರಾಮಯ್ಯನವರು ಇರುವಾಗ ಯಾವುದೇ ದಾಖಲೆ ಮಾಡಿಸಿಕೊಂಡಿರುವುದಿಲ್ಲ. ಕೋದಂಡರಾಮಯ್ಯನವರ ಜಮೀನುಗಳ ಬಗ್ಗೆ ಮಾಹಿತಿ ಇದೆ , ಸ.ನಂ. ಗೊತ್ತಿಲ್ಲ.

2. ಈಗ ತೋರಿಸುತ್ತಿರುವ ಬಾವಚಿತ್ರದಲ್ಲಿರುವ ಮನೆ ಯಾರದ್ದು ಎಂದು ಗೊತ್ತಿಲ್ಲ. ಸದರಿ ಬಾವಚಿತ್ರದಲ್ಲಿರುವ ಮನೆ ಆನಂದ್ ರವರು ಸ.ನಂ. 53/1 ರಲ್ಲಿ ಕಟ್ಟಿರುವ ಮನೆ ಮತ್ತು ತೋಟ ಎಂದರೆ ಸರಿಯಲ್ಲ. ಸ.ನಂ.41/4 ರ ಜಮೀನು ರಂಗನಾಥಪುರದಲ್ಲಿ ಇದೆ. ಸದರಿ ಜಮೀನಿನನ್ನು ನನ್ನ ಅಣ್ಣ ನೋಡಿಕೊಳ್ಳುತ್ತಿದ್ದಾರೆ. ಅದು ಬೀಳು ಜಮೀನು ಆಗಿರುತ್ತದೆ. ಸ.ನಂ.53/4 ಮತ್ತು ಸ.ನಂ.41/4 ಅಕ್ಕ ಪಕ್ಕದಲ್ಲಿದೆ ಎಂದರೆ ಸರಿಯಲ್ಲ. ಮುಂದುವರೆದು 2 ಕಿ.ಮೀ ದೂರದಲ್ಲಿದೆ ಎಂದು ನುಡಿಯುತ್ತಾರೆ. ಸ.ನಂ.53/4 ರಲ್ಲಿರುವ ಬೋರ್ ನ ವ್ಯವಸ್ಥೆಯಿಂದ ಸ.ನಂ. 41/4 ಕ್ಕೆ ನೀರು ಹಾಯಿಸಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ಸ.ನಂ.53/4 ರಲ್ಲಿ ಜಮೀನನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದು ಗೊತ್ತಿಲ್ಲ. ಸದರಿ ಜಮೀನನ್ನು ಕೋದಂಡರಾಮಯ್ಯನವರು ಬಗರ್ ಹುಕುಂ ಮೇರೆಗೆ ಉಳುಮೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ.

3. ಐಟಂ ನಂ.1 ರಿಂದ 8 ರ ಆಸ್ತಿಗಳು ಮೂಲತಃ ಕೋದಂಡರಾಮಯ್ಯ ನವರಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನುಗಳು ಕೋದಂಡರಾಮಯ್ಯನವರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ. ಸ.ನಂ. 55/4 ರಲ್ಲಿ 1 ಎಕರೆ 33 ಗುಂಟೆ ಜಮೀನಿನಲ್ಲಿ ತೆಂಗು , ಅಡಿಕೆ ತೋಟ ಮತ್ತು ಬೋರ್ ವೆಲ್ ಇದೆ. ಐಟಂ ನಂ. 1 ರಿಂದ 8 ರ ಆಸ್ತಿಗಳನ್ನು ಕೋದಂಡರಾಮಯ್ಯನವರೇ ಅಭಿವೃದ್ದಿ ಪಡಿಸಿ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

4. 4ನೇ ಪ್ರತಿವಾದಿಯವರು ಕೋದಂಡರಾಮಯ್ಯನವರಿಗೆ ದಿಃ 13-11-2018 ರಲ್ಲಿ ರಿಲೀಸ್ ಡೀಡ್ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ಆಸ್ತಿ ಹಾಳು ಮಾಡುತ್ತಾರೆ ಎಂದು ನನ್ನ ತಂದೆ ಬರೆಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ರಿಲೀಸ್ ಡೀಡ್ ಬರೆದುಕೊಟ್ಟ ನಂತರ ಆನಂದ್ ರವರು ಒಂದು ಮನೆ ಕಟ್ಟಿಕೊಂಡು ಬೇರೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಕಾಮರಾಜು ಮತ್ತು ಕೋದಂಡರಾಮಯ್ಯನವರು ಹಳೇ ಮನೆಯಲ್ಲಿ

ಒಟ್ಟಿಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಕಾಮರಾಜು ಮದುವೆಯಾದಾಗಿನಿಂದಲೂ ಬೇರೆ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಕಾಮರಾಜು ಮತ್ತು ಕೋದಂಡರಾಮಯ್ಯನವರು ಅಡಿಕೆ ತೋಟವನ್ನು ನೋಡಿಕೊಂಡು ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಮೂರು ಜನ ಸೇರಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

5. ಸದರಿ ತೋಟದಲ್ಲಿ ಒಂದು ವರ್ಷಕ್ಕೆ ಅಂದಾಜು ಎಷ್ಟು ಆದಾಯ ಬರುತ್ತಿತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆ ಮತ್ತು ತಾಯಿಗೆ ನೋಡುಬೇಕು ಮತ್ತು ಹಬ್ಬ ಹುಣ್ಣಿಮೆಗೆ ನಾನು ತವರಿಗೆ ಹೋಗುತ್ತಿದ್ದೆ. ನಾನು ಬಂದು ಹೋಗುತ್ತಿದ್ದ ಕಾರಣ ಮನೆಯ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ನೋಡಿಕೊಳ್ಳುತ್ತಿದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಿಲೀಸ್ ಡೀಡ್ ಆದ ಬಗ್ಗೆ ನನಗೆ ಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆನಂದ್ ರವರೇ ಕಾಮರಾಜು ಮತ್ತು ಕೋದಂಡರಾಮಯ್ಯ ನವರ ಜೊತೆ ಇರಲು ಆಗುವುದಿಲ್ಲ ಎಂದು 4 ಎಕರೆ ತೋಟ ತೆಗೆದುಕೊಂಡು ರಿಲೀಸ್ ಡೀಡ್ ಬರೆದುಕೊಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.